ಸೂಪರ್ ಜನಮನ

ಸೋಮವಾರ 19 ಮೇ 2014

# ಕಣಕ

ಪುಟಗಳ ವಿನ್ಯಾಸ: ಅಪೂರ್ವ



ನಾವು ಒಂದು ಸಾಧಾರಣ ತಾರೆಯ ಕುಟುಂಬದ ಪುಟ್ಟ ಗ್ರಹದ ಮೇಲಿರುವ ಸುಧಾರಿತ ಮಂಗನ ತಳಿಯ ವಂಶಸ್ತರಷ್ಟೆ. ಆದರೆ ನಾವು ಈ ಬ್ರಹ್ಮಾಂಡವೇನೆಂದು ತಿಳಿದುಕೊಳ್ಳಬಲ್ಲೆವು. ಇದರಿಂದಲೆ ನಾವು ವಿಶಿಷ್ಟರು.

— ಸ್ಟೀಫನ್ ಹಾಕಿಂಗ್

## ಚಿತ್ರ–ವಿಶೇಷ

(ಚಿತ್ರಕೃಪೆ: ಡಾ. ರೆಚೆಸ್ ಬರ್ಗ್)

ಏನಿದು? ನಿಮಗೆ ಉತ್ತರ ತಿಳಿದಿದೆಯೇ? ಮರಳಲ್ಲಿ ಮೂಡಿಸಿದ ಚಿಮಣಿ ಅಲ್ಲ. ಹಗೇವು ಅಲ್ಲ. ಆಫ್ರಿಕಾದ ಬುಡಕಟ್ಟು ಜನಾಂಗದ ಕೋಟೆಗಳೂ ಅಲ್ಲ. ಹುಕ್ಕಾವಂತೂ ಅಲ್ಲವೇ ಅಲ್ಲ? ಹಾಗಿದ್ದರೆ ಇದೇನು? ಉತ್ತರ ತಿಳಿದಿದ್ದರೆ ಬರೆದು ತಿಳಿಸಿ (super.janamana@gmail.com). ಇಲ್ಲದಿದ್ದರೆ ಮುಂದಿನ ವಾರ ಇದೇ ಸ್ಥಳದಲ್ಲಿ ಉತ್ತರವನ್ನು ನಿರೀಕ್ಷಿಸಿ.

## ನಾನು ಪಾರಂಪರಿಕ ಸುಂದರಿ

ಅಂಗನೆಯರ ಸೀರೆಯ ವಿನ್ಯಾಸ ಇದಲ್ಲ. ಹುಳುಕು ಬಿದ್ದು ಶಿಥಿಲವಾದ ಎಲೆಯೂ ಅಲ್ಲ. ಸಿಂಕ್ರೋಟ್ರಾನ್ ಎನ್ನುವ ಸುಸಜ್ಜಿತ ಯಂತ್ರವನ್ನು ಬಳಸಿ ಚಿತ್ರಿಸಿದ ರಂಗೋಲಿ. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ, ಎಲೆಯ ಎಕ್ಸ್–ರೇ ಚಿತ್ರ. ಇದರಲ್ಲಿ ಕಾಣುವುದೆಲ್ಲ ಪುರಾತನ ಎಲೆಯೊಂದರಲ್ಲಿ ಇದ್ದಿರಬಹುದಾದ ವಿವಿಧ ಲೋಹಗಳ ಪ್ರಮಾಣ. ತಾಮ್ರ, ಸತು ಮತ್ತು ನಿಕಲ್ ಲೋಹಗಳ ಪರಮಾಣುಗಳು ಏಳು ಕೋಟಿ ವರ್ಷಗಳಿಗೂ ಹಿಂದೆ ಇದ್ದ ಈ ಎಲೆಯಲ್ಲಿ ಎಲ್ಲೆಲ್ಲಿ ಇವೆ ಅನ್ನುವುದನ್ನು ಬ್ರಿಟನ್ನಿನ ಮ್ಯಾಂಚೆಸ್ಟರ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಚಿತ್ರಿಸಿರುವುದು ಹೀಗೆ.

(ಚಿತ್ರಕೃಪೆ: ಮ್ಯಾಂಚೆಸ್ಟರ್ ವಿಶ್ವವಿದ್ಯಾನಿಲಯ)

ಸಿಂಕ್ರೋಟ್ರಾನ್ ನಲ್ಲಿ ನೂರು ಸೂರ್ಯನ ಪ್ರಭೆಗಿಂತಲೂ ಪ್ರಖರವಾದ ಕಿರಣಗಳು ಹೊಮ್ಮುತ್ತವೆ. ಇವನ್ನು ತಾಕಿಸಿದಾಗ, ಪುರಾತನ ಪಳೆಯುಳಿಕೆಯಲ್ಲಿನ ಲೋಹದ ಪರಮಾಣುಗಳು ಕಿರಣಗಳಲ್ಲಿನ ಶಕ್ತಿಯನ್ನು ತುಸು ಹೀರಿಕೊಳ್ಳುತ್ತವೆ. ಕೆಲವು ಕ್ಷಣಗಳ ಅನಂತರ ಹೀರಿಕೊಂಡದ್ದರಲ್ಲಿ ಸ್ವಲ್ಪವನ್ನು ಮತ್ತೆ ಉಸು–ರಿಬಿಡುತ್ತವೆ. ತಾಮ್ರದಿಂದ ಹೀಗೆ ಹೊಮ್ಮುವ ಶಕ್ತಿ ನಿಕಲ್‌ನದಕ್ಕಿಂತಲೂ ಬೇರೆ. ಸತುವಿನದಕ್ಕಿಂತಲೂ ಭಿನ್ನ. ಸಿಂಕ್ರೋಟ್ರಾನ್‌ನಿಂದ ಬೆಳಗಿಸಿದ ಪಳೆಯುಳಿಕೆಯಿಂದ ಎಲ್ಲೆಲ್ಲಿ ಯಾವ ರೀತಿ ಶಕ್ತಿ ಹೊರ ಹೊಮ್ಮುತ್ತಿದೆ ಎನ್ನುವುದನ್ನು ಗುರುತಿಸಿದರೆ, ಎಲ್ಲೆಲ್ಲಿ ಯಾವ್ಯಾವ ಲೋಹಗಳಿವೆ ಎನ್ನುವುದು ತಿಳಿದ ಹಾಗೆ. ಆ ಅಂಶವನ್ನು ಬಳಸಿಕೊಂಡು ಪ್ರತಿಲೋಹಕ್ಕೂ ಬೇರೆಯದೇ ಬಣ್ಣವನ್ನು ಕೊಟ್ಟು ಈ ಚಿತ್ರವನ್ನು ಚಿತ್ರಿಸಿದ್ದಾರೆ. ಏಳುಕೋಟಿ ವರ್ಷಗಳ ಹಿಂದೆ ಇದ್ದ ಈ ಎಲೆಯಲ್ಲಿನ ಲೋಹಗಳ ಪ್ರಮಾಣ–ಕ್ಕೂ, ಈ ಬೇಸಗೆಯಲ್ಲಿ ಉದುರಿ ಬಿದ್ದಿರುವ ಎಲೆಯಲ್ಲಿನ ಲೋಹಗಳ ಪ್ರಮಾಣಕ್ಕು ಹೆಚ್ಚಿನ ವ್ಯತ್ಯಾಸವಿಲ್ಲ ಎನ್ನುವುದು ಇವರ ಅಂಬೋಣ. ಪ್ರತ್ಯಕ್ಷ ಕಾಣಲಾಗದ್ದನ್ನ, ಯುಕ್ತಿಯಿಂದ ಪರೋಕ್ಷವಾಗಿ ಪರಾಮರ್ಶಿಸುವ ಸಾಮರ್ಥ್ಯ ವಿಜ್ಞಾನಕ್ಕಷ್ಟೆ ಇದೆ ಅಲ್ಲವೇ?

## ಡಾಕ್ಟರ್ಸ್ ಕಾರ್ನರ್

ಆರೋಗ್ಯವೇ ಭಾಗ್ಯ ಹೌದಲ್ವೇ? ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು ಅಂದರೆ, ವ್ಯಾಯಾಮ, ಅಥವಾ ಎಕ್ಸೈಸ್ ಮಾಡಬೇಕು ಎಂಬುದು ಎಲ್ಲರ ಅನಿಸಿಕೆ. ಆದರೆ, ಇದರೊಂದಿಗೆ ಅನೇಕ ವಿಷಯಗಳನ್ನು ನಾವು ಅನುಸರಿಸಬೇಕಾಗುತ್ತದೆ.

ಆರೋಗ್ಯ ಎಂಬಲ್ಲಿ ನಮ್ಮ ದೇಹದ ಜೊತೆಗೆ ಮಾನಸಿಕ ಸ್ವಾಸ್ಥ್ಯವನ್ನೂ ಸಹ ಕಾಪಾಡಿಕೊಳ್ಳಬೇಕು ಎಂಬುದು ಸಹ ಅಡಕವಾಗಿರುತ್ತದೆ. ದೈಹಿಕವಾಗಿ ಆರೋಗ್ಯವಾಗಿದ್ದು, ಮಾನಸಿಕವಾಗಿ ಅನಾರೋಗ್ಯವೋ, ಇಲ್ಲವೇ ತದ್ವಿರುದ್ಧ ಆದರೆ ನಾವು ಆರೋಗ್ಯವಂತರು ಎನಿಸಿಕೊಳ್ಳಬಹುದೆ? ಖಂಡಿತ ಇಲ್ಲ. ನಮ್ಮ ಜೀವಿತದಲ್ಲಿ ಎಲ್ಲ ಚಟುವಟಿಕೆಗಳೂ ಸರಿ ಸುಮಾರು 65–70 ವರುಷ ಆಗುವವರೆಗೂ ಸಹ ಉತ್ಸಾಹ ಭ–ರಿತರಾಗಿ ಇರಬೇಕೆಂದರೆ, ದೇಹದ ಜೊತೆ ಮನಸನ್ನೂ ಸಹ ಆರೋಗ್ಯ ವಾಗಿಸಿಕೊಳ್ಳಬೇಕು. ಇದು ಬರಿಯ ವ್ಯಕ್ತಿಗತ ಆರೋಗ್ಯ ಆಗಿರದೇ, ಸಮಾಜ ಸ್ವಾಸ್ಥ್ಯಕ್ಕೂ ಸಹ ದಾರಿ ಆಗುತ್ತದೆ. ಅಲ್ಲದೆ ಸ್ವಾಸ್ಥ್ಯ ದೇಹ–ಮನಸ್ಸು ಉಳ್ಳವರು, ಹೆಚ್ಚೆಚ್ಚು ಕಾರ್ಯ ಪ್ರವೃತ್ತರಾಗಿ. ಸಮಾಜದ ಆರ್ಥಿಕ ಏಳಿಗೆಗೂ ಕೂಡ ಭಾಗಿ ಆಗುತ್ತಾರೆ.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಆಚಾರ–ವಿಚಾರ–ನಿದ್ರಾ– ಆಹಾರ ಎಲ್ಲವೂ ಸಮವಾಗಿದ್ದಲ್ಲಿ ದೇಹ–ಮನಸ್ಸು ವಿಹಾರ ಅಂದರೆ ಸಂತೋಷಮಯವಾಗಿರಲು ಸಾಧ್ಯ ಎಂದು ಹೇಳುತ್ತದೆ.

ನಾವು ಆರೋಗ್ಯವಾಗಿರುವುದು ಕೇವಲ ಒಂದು ದಿನದ ಅಥವಾ ಒಂದು ನಿರ್ದಿಷ್ಟ ಸಮಯಕ್ಕೆ ಸೀಮಿತವಾಗಿಲ್ಲ. ಇದು ಅನೇಕ ಮಜಲುಗಳನ್ನು ಹೊಂದಿರುತ್ತದೆ ಎಂಬುದನ್ನು ಆಧುನಿಕ ವೈದ್ಯಕೀಯ ವಿಜ್ಞಾನವೂ ಹೇಳುತ್ತದೆ. ಇದರಲ್ಲಿ ಭಾವನಾತ್ಮಕ (ಎಮೋಷನಲ್), ದೈಹಿಕ (ಫಿಸಿಕಲ್), ಮಾನಸಿಕ (ಮೆಂಟಲ್) ನೊಂದಿಗೆ ಆಧ್ಯಾತ್ಮಿಕ (ಸ್ಪಿರುಚಿಯಲ್) ಸ್ವಾಸ್ಥ್ಯವೂ ಸಹ ಸೇರಿರುತ್ತದೆ.

ಆರೋಗ್ಯವರ್ಧನೆ ಮತ್ತು ಆರೋಗ್ಯ ಸಂರಕ್ಷಣೆ ಎರಡು ಮುಖ್ಯ ವಿಷಯಗಳು. ನಮಗೆ ದೊರೆಯುತ್ತಿರುವ ಸ್ವಾಸ್ಥ್ಯವನ್ನು ಸಂರಕ್ಷಿಸಿ ಕೊಳ್ಳಲು ನಿಯಮಿತ ಆಹಾರ, ವಿಹಾರ, ನಿದ್ರಾ ಒಂದೆಡೆಯಾದರೆ, ಮತ್ತೊಂದೆಡೆ ದೈನಂದಿನ ವ್ಯಾಯಾಮ, ನಡಿಗೆ, ಓಟ ಮುಂತಾದವುಗಳು ಆರೋಗ್ಯ ವರ್ಧನೆಗೆ ಕಾರಣವಾಗುತ್ತವೆ.

ವಯೋಮಾನಕ್ಕೆ ತಕ್ಕಂತೆ ಆರೋಗ್ಯ ಕಾಪಾಡಿಕೊಳ್ಳುವುದು ಸೂಕ್ತ. ಮಕ್ಕಳಲ್ಲಿನ ಆರೋಗ್ಯವರ್ಧಕ ಮಾರ್ಗ ಒಂದೆಡೆಯಾದರೆ, ಮಧ್ಯ ವಯಸ್ಕ ಹಾಗೂ ಹಿರಿಯ ವಯಸ್ಸಿನವರಿಗೆ ಅವರ ದೇಹ ಮನಸ್ಸಿನ ಧಾರ್ಢ್ಯ ಅನುಸಾರವಾಗಿ ಉಪಾಯಗಳನ್ನು ಹೊಂದಿಸಿಕೊಂಡು, ಆರೋಗ್ಯ ಸಂರಕ್ಷಣೆ ವರ್ಧನೆಗೆ ಅನುವು ಮಾಡಿಕೊಳ್ಳಬಹುದು. ಉದಾಹರಣೆಗೆ ವಯೋವೃದ್ಧರು ತೋಟಗಾ–ರಿಕೆ, ಕಥೆ, ಲೇಖನ ಬರೆಯುವುದು, ಕಥೆ ಹೇಳುವುದು, ಓದುವುದು ಮುಂತಾದವುಗಳನ್ನು ಮಾಡಿದಲ್ಲಿ ಅವರ ಮಾನಸಿಕ ಆರೋಗ್ಯ, ದೈಹಿಕ ಆರೋಗ್ಯವೂ ಉತ್ತಮ ರೀತಿಯಲ್ಲಿ ಇರುತ್ತದೆ. ಮುಂಬರುವ ಕಂತುಗಳಲ್ಲಿ ಈ ವಿಷಯಗಳ ಹಾಗೂ ವೈದ್ಯಕೀಯ ವಿಜ್ಞಾನದ ಲೋಕವನ್ನು ಪ್ರವೇಶಿಸಿ ನಮ್ಮ ಆಧುನಿಕ ಕಾಲದಲ್ಲೂ ಸಹ ನಮ್ಮ ಹಿಂದಿನ ಭಾರತೀಯ ಪರಂಪರೆಯ ಯೋಗ, ಗ್ರಾಮೀಣ ಕ್ರೀಡೆಗಳು, ಆಧುನಿಕ ಪ್ರಪಂಚದ ಅನೇಕ ವಿಸ್ಮಯ ಆಟಗಳು ಎಲ್ಲವೂ ನಮ್ಮ ಆರೋಗ್ಯ–ಭಾಗ್ಯ ಕಾಪಾಡುವುದರಲ್ಲಿ ಹೇಗೆ ಸಹಕಾರಿ ಆಗುತ್ತವೆ. ಆಧುನಿಕ ವೈದ್ಯಕೀಯ ವಿಜ್ಞಾನ ನಮ್ಮನ್ನು ಹೀಗೆ ವಿಸ್ಮಯಗೊಳಿಸುತ್ತವೆ ಎಂಬುದನ್ನು ಸಹ ನೋಡಣ ಎಂದು ಈವತ್ತಿಗೆ ವಿದಾಯ ಹೇಳುತ್ತಿದ್ದೇನೆ.

ಡಾ. ಅನಿಲ್ ಸಾಂಗ್ಲಿ
ನರರೋಗ ಶಾಸ್ತ್ರ ಚಿಕಿತ್ಸಾ ತಜ್ಞರು
(ಮೊ. 9980705600)

## ಶಾಯಿ

ಕಪ್ಪು–ಬಿಳುಪು ಛಾಯಾಚಿತ್ರಗಳ ಮುದ್ರಣ ರಾಸಾಯನಿಕ ತಂತ್ರವಷ್ಟೆ. ಬೆಳ್ಳಿಯ ಸಂಯುಕ್ತವೊಂದನ್ನು ಲೇಪಿಸಿದ ಕಾಗದವನ್ನು ಬೆಳಕಿಗೆ ತೆರೆದುಕೊಂಡಾಗ ಲೇಪನ ಬೆಳಕು ಬಿದ್ದಲ್ಲಿಯಷ್ಟೆ ಕಪ್ಪಗಾಗುತ್ತಿತ್ತು. ಬಿಂಬ ಮೂಡುತ್ತಿತ್ತು. ಈ ತಂತ್ರದಲ್ಲಿ ಬಲಸುವ ಬೆಳ್ಳಿಯ ಸಂಯುಕ್ತವನ್ನೇ ಬಳಸಿ ಅಚ್ಚಳಿಯದ ಶಾಯಿ ತಯಾರಿಸಲಾಗಿದೆ.

ಮೂಲತಃ ಈ ಶಾಯಿ ಬೆಳ್ಳಿಯ ಲವಣದ ಬಣ್ಣವಿಲ್ಲದ ದ್ರಾವಣ. ಇದನ್ನು ಚರ್ಮಕ್ಕೆ ಸೋಕಿಸಿದಾಗ, ಚರ್ಮದಲ್ಲಿರುವ ಬೆವರು ಹಾಗೂ ಜೀವಕೋಶಗಳಲ್ಲಿರುವ ಕ್ಲೋರಿನ್ ಜೊತೆಗೆ ಅದು ಪ್ರತಿಕ್ರಿಯಿಸುತ್ತದೆ. ಬೆಳ್ಳಿಯ ಕ್ಲೋರೈಡ್ ಆಗುತ್ತದೆ. ಬೆಳಕು ಬಿದ್ದಾಗ ಬೆಳ್ಳಿಯ ಕಪ್ಪಾಗುತ್ತದೆ. ಇದುವೇ ಅಚ್ಚಳಿಯದ ಶಾಯಿಯ ಮಾಯ. ಮೊದಲಿಗೆ ಈ ದ್ರಾವಣಕ್ಕೆ ಬಣ್ಣವಿರಲಿಲ್ಲ. ಹಚ್ಚುವಾಗಲೂ ಅದು ಕಾಣುತ್ತಿರಲಿಲ್ಲ. ಬೆಳಕಿನ ಕ್ರಿಯೆ ನಡೆಯಲು ಕೆಲವು ನಿಮಿಷಗಳಾದರು ಬೇಕಾದ್ದರಿಂದ, ಅಷ್ಟರೊಳಗೇ ಆ ವ್ಯಕ್ತಿ ಮರಳಿ ಮತಗಟ್ಟೆಗೆ ಬರುವ ಸಾಧ್ಯತೆಗಳಿದ್ದುವು. ಇದನ್ನು ತಡೆಯಲು ದ್ರಾವಣಕ್ಕೆ ಸಾಧಾರಣ ಬಣ್ಣವನ್ನು ನೀಡಲಾಗಿದೆ. ಇಷ್ಟವಾದ ಬಣ್ಣವನ್ನು ಬೆರೆಸಿ ನಿಮ್ಮಿಚ್ಛೆಯ ಬಣ್ಣದ 'ಚುನಾವಣಾ ಇಂಕ್' ತಯಾ–ರಿಸಬಹುದು. ಆಫ್ರಿಕಾದ ದೇಶವೊಂದು ಕೇಸರಿ ಬಣ್ಣದ ಶಾಯಿಯನ್ನು ಬಳಸುತ್ತದೆ. ಆದ–ರೆ ಈ ಶಾಯಿಯೂ ಬೆಳ್ಳಿಯ ರಾಸಾಯನಿಕದ ಪ್ರಭಾವದಿಂದಾಗಿ ತುಸು ಸಮ ಯದ ಅನಂತರ ಕಪ್ಪಾಗಿ ಬಿಡುತ್ತದೆ.

ಶಾಯಿಯನ್ನು ಅಳಿಸಲು ಸಾಧ್ಯವಿಲ್ಲವೇಕೆ? ಏಕೆಂದರೆ ಶಾಯಿ ಬರೆ ಬಣ್ಣವಲ್ಲ. ಅದು ಚರ್ಮದ ಮೇಲ್ಪದರದ ಜೀವಕೋಶಗಳಲ್ಲಿನ ಕ್ಲೋ–ರಿನ್ ಜೊತೆ ವರ್ತಿಸುವುದ–ರಿಂದಷ್ಟೆ ಕಪ್ಪಾಗುತ್ತದೆ. ಈ ಮಸಿಯನ್ನು ತೆಗೆಯಬೇಕೆಂದರೆ ಜೀವಕೋಶಗಳನ್ನೇ ತೆಗೆಯಬೇಕು. ಚರ್ಮ ಹಾಗೂ ಉಗುರಿನ ಜೀವಕೋಶಗಳು ತಾವಾಗಿ ಉದುರಲು ಕನಿಷ್ಠ 30 ದಿನಗಳಾದರೂ ಬೇಕು. ಅಲ್ಲಿಯವರೆಗೂ ಈ ಶಾಯಿ ಅಚ್ಚಳಿಯದೆ ಉಳಿಯುತ್ತದೆ. ಖೊಟ್ಟಿ ಮತ ಬೀಳುವುದನ್ನು ತಡೆಯುತ್ತದೆ.

ಅನಕ್ಷರಸ್ತರೇ ಇರುವ, ಬಡ ರಾಷ್ಟ್ರಗಳಲ್ಲಿಯೂ ಪ್ರಜಾಪ್ರಭುತ್ವದ ಚರಿತ್ರೆಯನ್ನು ಬರೆಯುತ್ತಿರುವ ಸರಳ ತಂತ್ರದ ಈ ಶಾಯಿಯ ಮೂಲ ತಂತ್ರ ಮಾತ್ರ ಆರಂಭದಿಂದ ಇಂದಿನವರೆವಿಗೂ ಬದಲೇ ಆಗಿಲ್ಲ ಅನ್ನುವುದು ಸತ್ಯ!

–'ಜನಮನ' ವಿಶೇಷಪ್ರನಿಧಿ

## ಫಿಲ್ಮ್ ಟೈಂ

ಮೇ 17 – 22, 2014

| ಚಿತ್ರಮಂದಿರ | ದೂರವಾಣಿ | ಚಿತ್ರ | ಪ್ರದರ್ಶನ |
|---|---|---|---|
| ಬಾಲಾಜಿ ಡಿಲಕ್ಸ್ | 2497199 | ಎಕ್ಸ್‌ಪೋರ್ಟ್ (ಹಿ) | 4 |
| ಗಾಯತ್ರಿ | 2443568 | ಹರ (ಕ) | 4 |
| ಲಿಡೋ | 2420885 | ಜಸ್ಟ್ ಲವ್ (ಕ) | 4 |
| ಲಕ್ಷ್ಮಿ | 2443584 | ಮಾಣಿಕ್ಯ (ಕ) | 4 |
| ಒಲಂಪಿಯಾ | 2420373 | ಚಂದ್ರಲೇಖ (ಕ) | 4 |
| ಪದ್ಮ | 2521923 | ಮಿಸ್ಟರ್ ಫ್ರಾಡ್ (ಮ) | 4 |
| ಪ್ರಭಾ | 2423569 | ಮಾಣಿಕ್ಯ (ಕ) | 4 |
| ರಾಜಕಮಲ್ | 2423554 | ಗಾಡ್‌ಜಿಲ್ಲಾ (ಇ) | 4 |
| ಸರಸ್ವತಿ | 2541451 | ಮಾಣಿಕ್ಯ (ಕ) | 4 |
| ಶಾಂತಲಾ | 2427584 | ಅಜಿತ್ (ಕ) | 4 |
| ಸಂಗಂ | 2520494 | ಅಜಿತ್ (ಕ) | 4 |
| ಶ್ರೀ ನಾಗರಾಜ್ | 2520490 | – | ಬೆ.11,ಮ.2 |
| ಸ್ಪಲಿಂಗ್ | 2481170 | – | 4 |
| ಸ್ಕೈಲೈನ್ | 2481170 | ಅಜಿತ್ (ಕ) | 4 |
| ತಿಬ್ಬಾದೇವಿ | 2422958 | ಉಗ್ರಂ (ಕ) | 4 |
| ಉಡ್‌ಲ್ಯಾಂಡ್ಸ್ | 2422871 | ಮಾಣಿಕ್ಯ (ಕ) | 4 |

SATYAM CINEPLEXES — ಸತ್ಯಂ: ದೂ. 0821–2533444 — ಮೇ. 17 – 22

| ಸ್ಕ್ರೀನ್ | ಚಿತ್ರ | ಪ್ರದರ್ಶನ |
|---|---|---|
| 1 | ಅಮೇಜಿಂಗ್ ಸ್ಪೈಡರ್ ಮ್ಯಾನ್ 2 (ಇ–3ಡಿ) | ಸಂ.4 |
| | ಗಾಡ್‌ಜಿಲ್ಲ (ಇ) | ಬೆ.11,ಮ.1.30, ಸಂ.6.30, ರಾ.9.20 |
| 2 | 2 ಸ್ಟೇಟ್ಸ್ (ಹಿ) | ಬೆ. 10.45 |
| | ಮಾಣಿಕ್ಯ (ಕ) | ಮ. 1.40 |
| | ದಿ ಎಕ್ಸ್‌ಪೋಸ್ (ಹಿ) | ಸಂ.7.30, ರಾ. 9.45 |
| | ಯಮರುಕ ಭಯಮೇ (ತ) | ಸಂ.4.45 |
| 3 | ಅಮೇಜಿಂಗ್ ಸ್ಪೈಡರ್ ಮ್ಯಾನ್ 2 (ಇ–3ಡಿ) | ಮ. 1.25, ರಾ. 9.50 |
| | ಗಾಡ್‌ಜಿಲ್ಲ (ಇ) | ಸಂ. 4.15 |
| | ಮಾಣಿಕ್ಯ (ಕ) | ಸಂ. 6.45 |
| | ಹರ (ಕ) | ಬೆ. 10.30 |
| 4 | ಜಸ್ಟ್ ಲವ್ (ಕ) | ಬೆ. 10.50, ಮ. 3.50 |
| | ದಿ ಎಕ್ಸ್‌ಪೋಸ್ (ಹಿ) | ಮ. 1.35 |
| | ಮಿಸ್ಟರ್ ಫ್ರಾಡ್ (ಮ) | ಸಂ. 6.45 |
| | ದಿ ಜಿಲ್ಡ್ಜನ್ ಆಫ್ ವಾರ್ | ರಾ. 9.30 |

DRC CINEMAS — ಡಿಆರ್‌ಸಿ: ದೂ. 0821–4240422/4241800 — ಮೇ. 19

| ಸ್ಕ್ರೀನ್ | ಚಿತ್ರ | ಪ್ರದರ್ಶನ |
|---|---|---|
| 1 | ಜಸ್ಟ್ ಲವ್ (ಕ) | ಬೆ. 10.15 |
| | ದಿ ಎಕ್ಸ್‌ಪೋಸ್ (ಹಿ) | ಮ. 1.45, ರಾ. 9.55 |
| | ಮಾಣಿಕ್ಯ (ಕ) | ಸಂ.4.15 |
| | ಗಾಡ್ಸ್‌ಜಿಲ್ಲ (ಇ–3ಡಿ) | ಸಂ.7.30 |
| 2 | ಹರ (ಕ) | ಬೆ. 10.45 |
| | ಅಮೇಜಿಂಗ್ ಸ್ಪೈಡರ್ ಮ್ಯಾನ್ 2 (ಇ–3ಡಿ) | ಮ.1.45 |
| | ಮೈಟಿ ರಾಜು ರಿಯೊ ಕಾಲಿಂಗ್ (ಹಿ) | ಸಂ. 4.45 |
| | ವಲ್ಲವನಕ್ಕು ಪುಲ್ಲುಂ ಆಯುದಂ (ತ) | ಸಂ.7 |
| | ಮಾಣಿಕ್ಯ (ಕ) | ರಾ.9.55 |
| 3 | ಮೈಟಿ ರಾಜು ರಿಯೊ ಕಾಲಿಂಗ್ (ಹಿ) | ಬೆ.11 |
| | 2 ಸ್ಟೇಟ್ಸ್ (ಹಿ) | ಮ.1.15 |
| | ದಿ ಜಿಲ್ಡ್ಜನ್ ಆಫ್ ವಾರ್ (ಹಿ) | ಸಂ.4.15 |
| | ಮಿಲಿಯನ್ ಡಾಲರ್ ಆರ್ಮ್ (ಇ) | ಸಂ.7.30 |
| | ಅಮೇಜಿಂಗ್ ಸ್ಪೈಡರ್ ಮ್ಯಾನ್ 2 (ಇ–3ಡಿ) | ರಾ. 9.55 |
| 4 | ಗಾಡ್ಸ್‌ಜಿಲ್ಲ (ಇ–3ಡಿ) | ಬೆ.11.15, ಮ.1.45, ಸಂ. 4.15, ರಾ.9.55 |
| | ಮಾಣಿಕ್ಯ (ಕ) | ಸಂ.6.45 |

ಹುಲಿಗಳ ಮೇಲಿನ ಪಟ್ಟೆಗಳು ಅವುಗಳ ಬೆರಳು ಗುರುತಿದ್ದಂತೆ. ಒಂದು ಹುಲಿಯಲ್ಲಿದ್ದಂತೆ ಪಟ್ಟೆಗಳು ಇನ್ನೊಂದರಲ್ಲಿ ಕಾಣುವುದಿಲ್ಲ.

## ವಾರದ ಭವಿತವ್ಯ

ದಿನಾಂಕ 18–05–2014 ರಿಂದ 24–05–2014 ರವರೆಗೆ

ರಮೇಶನ್ ಕಶ್ಯಪ
ಮೊ. ನಂ. 9740662363



**ಮೇಷ:** ರಾಶಿ ಸ್ಥನ ಕುಜನ ಸ್ಥಾನ ಬಲದಿಂದ ಅದ್ಭುತವಾದ ಯಶಸ್ಸುಗಳಿಸಲು ಸಹಕಾ–ರಿಯಾಗಿದೆ. ಶುಕ್ರನು ಬಲವರ್ಧನೆಗೊಂಡು ಸ್ವಯಂ ಸಂಪಾದನೆಯ ಹಾದಿಯಲ್ಲಿ ತೊಡಗಲಿದ್ದಾನೆ. ಗುರು ವಿಕ್ರಮ ಸ್ಥಾನದಲ್ಲಿರುವುದರಿಂದ ಸಮರ್ಥ ರೀತಿಯಲ್ಲಿ ಮುನ್ನಡೆಯುತ್ತ ಅಧಿಕಾರದ ಗದ್ದುಗೆ ಹಿಡಿಯಲು ಯತ್ನಿಸುತ್ತೀರಿ. ಪಂಚಮಾಧಿಪತಿ ರವಿ, ಬುಧನೊಡಗೂಡಿರುವುದರಿಂದ ಉದ್ಯೋಗ ವ್ಯವಹಾರಗಳಲ್ಲಿ ಸ್ವಲ್ಪ ತೊಡಕುಗಳು, ಮಾತಿನ ಚಕಮಕಿ ಉಂಟಾಗಲಿದೆ. ದಶಮಾಧಿಪತಿಯು ವಿಕ್ರಮ ಸ್ಥಾನದಲ್ಲಿ ರಾಹುವಿನೊಡಗೊಂಡಿರುವುದ–ರಿಂದ ಆಸ್ತಿ ಮಾರಾಟದ ಬಗ್ಗೆ ಆಲೋಚನೆ, ಪಾಲುದಾರಿಕೆಯಿಂದ ನಷ್ಟವೂ, ಪತ್ನಿಯ ಇಷ್ಟಾರ್ಥಗಳನ್ನು ಪೂರೈಸಲು ಶಕ್ತಿಮೀರಿ ಪ್ರಯತ್ನಿಸಲಿದ್ದೀರಿ. ಉದ್ಯೋಗ ಕೊರತೆ ನೀಗಲು ಶನಿ ಸ್ತೋತ್ರವನ್ನು ಓಂ ಶಂ ಶನೈಶ್ಚರಾಯ ನಮಃ ಎಂದು 108 ಬಾರಿ ಪಠಿಸಿ.

**ವೃಷಭ:** ರಾಶಿಯಲ್ಲಿ ರವಿ ಬುಧರ ಉಭಯಚ–ರಿಗಳಲ್ಲಿ ಗುರು ಶುಕ್ರರು ಇದ್ದು ಸೂರ್ಯ ಬುಧರ ವರ್ಚಸ್ಸು ವೃದ್ಧಿಯಾಗಿದೆ. ಅಧಿಕಾರ, ಅಂತಸ್ತು, ವಿದ್ಯಾರ್ಜನೆಯ ಉದ್ದೇಶಗಳು ಈಡೇರುತ್ತವೆ. ಗುರು ಪ್ರಸನ್ನನಾಗಿ ಧನ ಸ್ಥಾನದಲ್ಲಿರುವುದರಿಂದ ವಿಲ್ ಮೂಲಕ ಸಂಪತ್ತು ಪ್ರಾಪ್ತಿಯಾಗಲಿದೆ. ಹಿರಿಯ ಸೋದರನ ಭಾಗದ ಆಸ್ತಿ ಹಿರಿಯರು ಕೂಡಿಟ್ಟ ಹಣವೂ ಕೈಸೇರಲಿದೆ. ಶತ್ರುಗಳ ಕೆಟ್ಟ ಆಲೋಚನೆಗಳು ಫಲಿಸವುದಿಲ್ಲ. ಎದುರಾಳಿಗೆ ಸಿಂಹಸ್ವಪ್ನವಾಗಿರುತ್ತೀರಿ. ಅಂಗಾರಕನು ಪುತ್ರಸ್ಥಾನದಲ್ಲಿರುವುದರಿಂದ ಶಾರೀಕ ಸಂಬಂಧ ತೊಂದರೆಗಳು, ಋಣ ಬಾಧೆ, ಅನಿರೀಕ್ಷಿತ ಮನೋಭೀತಿ ಉಂಟಾಗಲಿದೆ. 9 ಹಿಡಿ ತೊಗರಿ ಬೇಳೆಯನ್ನು ಮನೆ ಆಚೆ ದಕ್ಷಿಣಭಾಗದಲ್ಲಿ ತುಳಿಯದ ಸ್ಥಳದಲ್ಲಿ ಹಾಕಿ.

**ಮಿಥುನ:** ವಂಶಪಾರಂಪರ್ಯವಾದ ಗುಣ ಧರ್ಮಗಳು ವಿದ್ಯಾ ವಿನಯಗಳು ಮೈಗೂಡಿರುತ್ತವೆ. ಬುದ್ಧಿಜೀವಿಗಳು, ಪಂಡಿತರು, ವಿದ್ವಾಂಸರುಗಳು ಪಾಂಡಿತ್ಯ ಪ್ರತಿಭೆಗಳಿಂದ ಖ್ಯಾತಿಗೊಳ್ಳಲಿದ್ದಾರೆ. ಬದುಕಿನ ಅನೇಕ ಕಹಿ ಘಟನೆಗಳು ನೆನಪಿನಲ್ಲಿ ಕಾಡುತ್ತಾ ಮಾನಸಿಕವಾದ ವ್ಯಸನಿಗಳಾಗಿ ಹಲವರು ಅಲೆದಾಟ ಮಾಡುವಂತಹ ಪ್ರಸಂಗವಿರುತ್ತದೆ. ಹಲವರು ಮಾತಾ ಪಿತೃಗಳ ಬಳಿ ಜಗಳವಾಡಿ ದೂರ ಸರಿಯಲಿದ್ದಾರೆ. ಭೂಮಿ ವಾದ ಜಟಿಲವಾಗಿ ಕೋರ್ಟ್, ಕಚೇರಿಯ ಮೆಟ್ಟಿಲು ಏರುವ ಸಂಭವವೂ ಇದೆ. ಉದ್ದೇಶಿತ ಕಾರ್ಯಗಳಿಗ